ಏರ್‌ವ್ಯಾನ್‌ನಲ್ಲೇ ಈ ಪರಿವೀಕ್ಷಣಾ ತಂಡ ಒಂದಿಷ್ಟು ಊಟ ಮಾಡಿ, ತಮ್ಮ ವಿಭಾಗಗಳಿಗೆ ಸೂಚನೆ ನೀಡಲು ವೀಡಿಯೊ ಕಾನ್ಫರೆನ್ಸ್‌ನಲ್ಲಿ ತೊಡಗಿದಾಗ ಇತರ ಅಧಿಕಾರಿಗಳು ತಮ್ಮ ಬಳಿ ಇದ್ದ 'ಎಂಪಿ ವಾಕಿ'ಯಲ್ಲಿ ಸಂವಹಿಸಿ ಫೀಡ್‌ಬ್ಯಾಕ್ ಪಡೆಯುತ್ತಿದ್ದರು.

* * *

## ಎಲ್ಲರಲ್ಲೂ ಗಾಬರಿ

ಹನ್ನಾ ತನ್ನ ರೇಡಿಯೇಟಿಂಗ್ ಜಾಕೆಟ್ ಧರಿಸಿ ಆಸುಪಾಸಿನ ಕವಲು ಮಾರ್ಗಗಳ ಮೂಲಕ ವಾಹನಗಳನ್ನು ಕಳುಹಿಸಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಶತಾಯಗತಾಯ ಪ್ರಯತ್ನಿಸಿದರೂ, ಇದು ಮುಗಿಯದ ಕೆಲಸವಾಗಿ ಕ್ರಮೇಣ ಅನಿಸತೊಡಗಿತ್ತು. ಮಧ್ಯರಾತ್ರಿ ಹನ್ನೆರಡಾದರೂ ಹನುಮಂತನ ಬಾಲದಂತೆ ಹಿಂದೆಡೆ ವಾಹನಗಳು ಸಾಲುಸಾಲಾಗಿ ಬಂದು ನಿಲ್ಲುತ್ತಿದ್ದವು. 'ಎಂಪಿ ವಾಕಿ'ಯ ಮೂಲಕ ಆ ರಸ್ತೆಯಲ್ಲಿ ಲಭ್ಯವಿದ್ದ ತನ್ನ ಸಹಚರರಿಗೆ ಸೂಚನೆ ನೀಡಿದ್ದಳಾದರೂ ಮಾಧ್ಯಮಗಳಲ್ಲಿ ಈ ತೆರವು ಕಾರ್ಯ ಹಾಗೂ ನಿರ್ಮಾಣ ಕಾರ್ಯ ಕನಿಷ್ಠ ಮೂರು ದಿನಗಳು ತೆಗೆದುಕೊಳ್ಳಬಹುದೆಂದು ಬಿಂಬಿಸಿದ್ದ ಸುದ್ದಿ ಎಲ್ಲರಲ್ಲೂ ಗಾಬರಿ ಮೂಡಿಸಿತ್ತು. ಆತಂಕದಿಂದ ರಸ್ತೆಗಿಳಿದವರು ರಸ್ತೆಯುದ್ದಕ್ಕೂ ನಿಂತ ಸಾಲು ಸಾಲು ವಾಹನಗಳಿಂದ ಹಿಂದಕ್ಕೆ ಹೋಗಲಾರದೆ ಮುಂದಿನ ವಾಹನ ಚಲಿಸುತ್ತಿದ್ದಂತೆಯೇ ತಾವೂ ಅದರ ಹಿಂದೆ ಸಾಗಿಬಿಡುತ್ತಿದ್ದರು.

ವಾಹನಗಳಲ್ಲಿ ಇದ್ದವರಿಗಾಗಲೇ ತಮ್ಮ ಮೊಬೈಲ್ ಸಂವಹನದ ಮೂಲಕ ಹಾಗೂ ವಾಹನಕ್ಕೆ ಅಳವಡಿಸಿದ್ದ ಟಿ.ವಿ.ಯಲ್ಲಿನ ಸುದ್ದಿ ಪ್ರಸಾರದ ಮೂಲಕ ಹಿನ್ನೆಲೆ ತಿಳಿದಿತ್ತು. ಕೆಲವರು ವಾಹನದಲ್ಲೇ ಕೂತು ದುರ್ಘಟನಾ ಸ್ಥಳವನ್ನು ನೇರಪ್ರಸಾರದಲ್ಲಿ ವೀಕ್ಷಿಸುತ್ತಿದ್ದರೆ, ಕೆಲವು ಶ್ರೀಮಂತರು ತಮ್ಮ ವಾಹನಗಳನ್ನು ನಿಲ್ಲಿಸಿದೆಡೆಯೇ ಬಿಟ್ಟು ಏರ್‌ಟ್ಯಾಕ್ಸಿ ಮೂಲಕ ಮನೆ ತಲುಪಲು ಅಣಿಯಾಗಿದ್ದರು. ಆಗರ್ಭ ಶ್ರೀಮಂತರಂತೂ ಕಾಪ್ಟರ್‌ಗಳ ಮೊರೆ ಹೋಗಿದ್ದರು. ಇದರಿಂದ ಏರ್‌ಟ್ಯಾಕ್ಸಿಗೆ ವಿಪರೀತ ಬೇಡಿಕೆ ಉಂಟಾಗಿ ಪೂರ್ವಭಾವಿಯಾಗಿ ಬುಕ್ಕಿಂಗ್ ಮಾಡಿದ್ದರೂ ಕಾಯುವಂತಾಗಿ ವಾಯುಮಾರ್ಗದಲ್ಲಿ ಹರಡಿದ್ದ ಎಲೆಕ್ಟ್ರಿಕ್ ವೈರ್ ಮೇಲೆ ಅಧಿಕ ಒತ್ತಡ ಬೀಳತೊಡಗಿತ್ತು.

ಹಲವರು ಹನ್ನಾಳನ್ನು ಸುತ್ತುವರಿದು ಪರಿಹಾರ ಮಾರ್ಗಗಳನ್ನು ಕೋರತೊಡಗಿದಾಗ ಅವರೆಲ್ಲರಿಗೂ ಸಾಂತ್ವನ ಹೇಳುವಷ್ಟರಲ್ಲಿ ಅವಳ ಗಂಟಲಿನ ಧ್ವನಿಯೇ ಕ್ಷೀಣಿಸಿದಂತಾಗಿ ಮೌತ್ ಸ್ಪೀಕರ್‌ನ ಮೊರೆ ಹೋಗಬೇಕಾಗಿತ್ತು. ಇದರಿಂದ ಅವಳಿಗೆ ನೇರವಾಗಿ ವಾಹನಗಳೊಳಗಿನ ಸ್ಪೀಕರ್‌ಗಳಿಗೆ ಸಂಪರ್ಕ ದೊರಕಿ ಸಮೂಹ ಆದೇಶಗಳನ್ನು ನೀಡಲು ಅನುಕೂಲವಾಗಿತ್ತು.

ಸಂಚಾರ ನಿಯಂತ್ರಣ ಕೊಠಡಿಗೆ ತಾನಿರುವ ಜಾಗಕ್ಕೆ ತುರ್ತಾಗಿ ಕ್ರೌಡ್ ಕಂಟ್ರೋಲ್ ರೋಬಾಟ್ ಕಳುಹಿಸಲು ಕೋರಿಕೆ ಸಲ್ಲಿಸಿದಾಗ ಕೆಲವೇ ನಿಮಿಷಗಳಲ್ಲಿ ಪೊಲೀಸ್ ಏರ್‌ವ್ಯಾನ್‌ನಲ್ಲಿ ರೋಬಾಟ್ ಒಂದರ ಆಗಮನವಾಗಿತ್ತು. ತುರ್ತು ಪರಿಸ್ಥಿತಿಗಳಲ್ಲಿ ಅವುಗಳನ್ನು ಅವಶ್ಯಕತೆಗೆ ಅನುಗುಣವಾಗಿ ಪ್ರೋಗ್ರಾಮ್ ಮಾಡಿ ಕಳುಹಿಸುವ ಪರಿಪಾಠವಿದ್ದು ಅದನ್ನು ಕಂಡೊಡನೆಯೇ ಹನ್ನಾಳಿಗೆ ಇನ್ನಿಲ್ಲದ ಬಲ ಬಂದಂತಾಗಿತ್ತು. ಆ ರೋಬಾಟ್‌ಗೆ ಸಾರ್ವಜನಿಕರ ಅಹವಾಲಿಗೆ ನಿರ್ದಿಷ್ಟ ಉತ್ತರಗಳನ್ನು ನೀಡಲು ಸೂಚನೆ ನೀಡಿ ತಾನು ಕೊಂಚ ವಿಶ್ರಾಂತಿ ಪಡೆಯಲೆಂದು ತನ್ನ ಕಾರಿನತ್ತ ಹೋಗಿ ಸೀಟಲ್ಲಿ ಕೂತಾಗ, ಎಂದೂ ಕಾಣದ ನೋವು ಮೈಕೈಯಲ್ಲಿ ಆವರಿಸಿಕೊಂಡಿತ್ತು. ಸೀಟಿಗೆ ಅಳವಡಿಸಿದ್ದ ಮಸಾಜರ್ ಅವಳ ನಿರ್ದೇಶನದಂತೆ ಕಾರ್ಯ ನಿರ್ವಹಿಸಿದ ಬಳಿಕ ಅವಳಿಗೆ ಆರಾಮ ಎನಿಸತೊಡಗಿತು. ನಂತರ ಮುಂದಿನಿಂದ ಟ್ರೇ ಆಕಾರದಲ್ಲಿ ಹೊರಬಂದ ಸ್ಟ್ಯಾಂಡ್‌ನಲ್ಲಿ ತನ್ನ ಆಹಾರದ ಬಾಕ್ಸ್‌ನ್ನಿರಿಸಿ ಸೇವಿಸತೊಡಗಿದ್ದಳು.

ಅವಳಂತೆಯೇ ಹಲವರು ತಮ್ಮ ವಾಹನಗಳಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳತೊಡಗಿದ್ದರು. ಹಲವಾರು ಗಂಟೆಗಳ ಕಾಲ ವಾಹನದಲ್ಲಿ ಪ್ರಯಾಣ ಮಾಡುವುದರಲ್ಲೇ ಕಾಲ ಕಳೆಯಬೇಕಿದ್ದವರಿಗೆ ಈ ಜೀವನ ಹೊಸದೇನೂ ಆಗಿರದೆ ತಮ್ಮ ಖಾಸಗಿ ಕೋಣೆಯಲ್ಲಿರುವ ಸೌಲಭ್ಯಗಳನ್ನು ಕ್ಯಾರವಾನ್ ಮಾದರಿಯಲ್ಲಿ ವಾಹನಗಳಲ್ಲಿ ಅಳವಡಿಸಿಕೊಂಡಿದ್ದು ಈಗ ಉಪಯೋಗಕ್ಕೆ ಬಂದಿತ್ತು. ಕೆಲವರಾಗಲೇ ತಮ್ಮ ವಾಹನದಲ್ಲಿನ ವಿಸ್ತರಿಸಬಹುದಾದ ಸೀಟ್‌ಗಳನ್ನೇ ಹಾಸಿಗೆಯನ್ನಾಗಿ ಮಾರ್ಪಡಿಸಿ ನಿದ್ರೆಗೆ ಜಾರಿದ್ದರು.

ತನ್ನ ಮನೆಯಲ್ಲಿ ತನಗಾಗಿ ಕಾಯುವವರೊಬ್ಬರಿರುವರೆಂಬ ಯೋಚನೆ ಬಂದೊಡನೆಯೇ ತನ್ನ ಎಂಪಿ ವಾಕಿಯಲ್ಲಿನ ಆಪ್ತ ಸಹಾಯಕ ತಂತ್ರಾಂಶವನ್ನು 'ಆನ್' ಮಾಡಿ ಆಪ್ತ ಸಹಾಯಕಿಯನ್ನು ಬರಮಾಡಿಕೊಂಡಳು. ವಾಕಿಯ ಮಾನಿಟರ್ ಮೇಲೆ ಕಾಣಿಸಿಕೊಂಡ ಚಿಕ್ಕ ಆಕೃತಿಯೊಂದು ಅವಳಿಂದ ಬರುವ ಅಪ್ಪಣೆಗಾಗಿ ಕಾದಿತ್ತು.

'ಶಮ್ಮಿ, ಮಾಮ್ ಮನೆಯಲ್ಲಿ ನನಗಾಗಿ ಕಾಯುತ್ತಿರಬೇಕು. ಈಗಿನ ಪರಿಸ್ಥಿತಿ ವಿವರಿಸಿ ನಾನು ಮನೆಗೆ ಸದ್ಯಕ್ಕಂತೂ ಬರಲಿಕ್ಕಾಗದೆಂದು ತಿಳಿಸು' ಎಂದಾಗ, 'ಆಯ್ತು ಮ್ಯಾಮ್' ಎಂದು ಪರದೆಯ ಮೇಲಿಂದ ಶಮ್ಮಿ ನಿರ್ಗಮಿಸಿತ್ತು.

ಪರದೆಯ ಹಿನ್ನೆಲೆಯಲ್ಲಿ ಅದು ತನ್ನ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಹನ್ನಾ ಬಲ್ಲವಳಾಗಿದ್ದಳು.

ಹನ್ನಾಳಿಗೆ ಈಗ ಹಗಲು ರಾತ್ರಿಯೆನ್ನದೆ ತಾನು ಸೇವೆಗೆ ಇಳಿಯುವ ಸಂದರ್ಭ ಬಂದಿದೆ ಎಂಬುದು ತಿಳಿದಿತ್ತೇನೋ. ಕಚೇರಿಯಿಂದ ಹೊರಬಂದ ಬಳಿಕ ಕೇವಲ ರಸ್ತೆಯಲ್ಲೇ ಕಾಲ ಕಳೆಯಬೇಕಾದ ಪರಿಸ್ಥಿತಿಯಲ್ಲಿ ಮುಖದ ಚರ್ಮ ಸುಕ್ಕಾದಂತಾಗಿ ಕೂದಲು ಕೆದರಿದ್ದು ರಿಫ್ರೆಶ್ ಆದರೆ ಸರಿಹೋಗುತ್ತದೇನೋ ಎನಿಸಿತ್ತು.

ಕಾರಿನ ಹಿಂಭಾಗಕ್ಕೆ ಸರಿದು, ಬಾಗಿಲಿಗಂಟಿದ್ದ ಬಟನ್‌ವೊಂದನ್ನು ಒತ್ತಿದಾಗ ಮೇಲಿನ ಭಾಗದಿಂದ ಡ್ರಾಪ್ ಆದ ಒಂದು ಕವಾಟನಂತಿದ್ದ ತೆಳು ವಿಭಜಕದಿಂದ ಕನ್ನಡಿ ಹಾಗೂ ಸ್ವಚ್ಛತಾ ಮೇಕಪ್ ಸಾಮಗ್ರಿಗಳು ಲಭ್ಯವಾಗಿದ್ದವು. ಮುಖಕ್ಕೆ ಲಘು 'ಟಚ್ ಅಪ್' ನೀಡಿ ಹೊರಬರಬೇಕೆನ್ನುವಷ್ಟರಲ್ಲಿ ಸಂಚಾರ ಕಮೀಷನರ್ ಹಾಗೂ ಟ್ರಾಫಿಕ್ ವಾರ್ಡನ್ ಮುಖ್ಯಸ್ಥರಿಬ್ಬರೂ ಒಟ್ಟಿಗೆ ಎಲ್ಲಾ ವಿಭಾಗಗಳ ವಾರ್ಡನ್ ಹೆಡ್‌ಗಳನ್ನು 'ಎಂಪಿ ವಾಕಿ'ಯಲ್ಲಿ ಕಾನ್ಫರನ್ಸ್ ಕಾಲ್‌ಗೆ ಆಹ್ವಾನವಿತ್ತಿದ್ದರು.

* * *

ಸವ್ಯಸಾಚಿಯವರು ಟ್ರಾಫಿಕ್ ವಾರ್ಡನ್ ಜಾನ್‌ರೊಡಗೂಡಿ ನಗರದ ವಿವಿಧ ವಿಭಾಗಗಳ ಉಸ್ತುವಾರಿ ಹೊಂದಿದ್ದ ಸಂಚಾರಿ ವಾರ್ಡನ್‌ಗಳನ್ನು ಸಂವಾದಕ್ಕೆ ಕರೆದಾಗ ಅವರುಗಳ ಮುಖಗಳನ್ನು 'ಎಂಪಿ ವಾಕಿ' ಸ್ಕ್ರೀನ್ ಮೇಲೆ ಕಾಣುತ್ತಲೇ ಉಸುರಿದ್ದರು.

'ಈಸ್ಟ್ ಡಿವಿಷನ್ ವಾರ್ಡನ್, ನಿಮ್ಮಲ್ಲಿ ಸಂಚಾರ ಸುಗಮಗೊಳಿಸುವತ್ತ ಏನಾದರೂ ತೊಂದರೆ ಎದುರಾಯಿತೇ?'

'ಈಸ್ಟ್ ಡಿವಿಷನ್ ವಾರ್ಡನ್ ಹಿಯರ್ ಸರ್. ನೋ ಪ್ರಾಬ್ಲಮ್. ಜನರಿಗೆ ತಮ್ಮ ಕಾರುಗಳಲ್ಲಿ ಜೀವನ ಸಾಗಿಸುವುದು ಹೇಗೆಂದು ಗೊತ್ತಿದೆ. ಮೂರು ದಿನಗಳ ಅವಧಿಯವರೆಗೆ ನಿಭಾಯಿಸಬಹುದು'.

'ವೆಸ್ಟ್ ಡಿವಿಷನ್ ವಾರ್ಡನ್ ಹಿಯರ್ ಸರ್. ಅಡ್ಡ ರಸ್ತೆಗಳಿಗೆ ಡೈವರ್ಟ್ ಮಾಡಲು ಸಾಧ್ಯವಾಗದ ವಾಹನಗಳಷ್ಟೇ ರಸ್ತೆಯ ಮೇಲಿವೆ. ಕೆಲವರನ್ನು ಏರ್‌ಬಸ್‌ನಲ್ಲಿ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಿದ್ದೇವೆ'.

ಒಂದೊಂದೂ ದಿಕ್ಕಿನಲ್ಲಿನ ಪರಿಸ್ಥಿತಿಗಳನ್ನು ಅವಲೋಕಿಸಿದ ಬಳಿಕ ಸವ್ಯಸಾಚಿ ಮುಖ್ಯ ವಿಷಯಕ್ಕೆ ಬಂದರು.

'ನಾವು ಜನರಿಗೆ ಆದಷ್ಟೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳನ್ನು ಬಳಸಲು ಹೇಳಿದ್ದರೂ ರಸ್ತೆಯ ಮೇಲಿನ ವಾಹನಗಳ ದಟ್ಟಣೆ ಕಡಿಮೆಯಾಗಲಿಲ್ಲ. ಅಂಡರ್‌ಗ್ರೌಂಡ್ ಹಾಗೂ ರಸ್ತೆಯ ಸಂಚಾರಕ್ಕೆ ಕಂಟಕ ಎದುರಾಗಿರುವುದರಿಂದ ಆಕಾಶಮಾರ್ಗಗಳನ್ನು ಬಳಸುವಂತಾಗಿದೆ. ಈಗ ಕೆಲವರ ಹೆಸರುಗಳನ್ನು ನಿಮ್ಮ ಟ್ರಾಫಿಕ್ ಹೆಡ್ ಜಾನ್ ಕರೀತಾರೆ. ಅವರೆಲ್ಲರೂ ಕೂಡಲೇ ದುರ್ಘಟನೆಯ ನೋಡಲ್ ಜಾಗಕ್ಕೆ ಬರಬೇಕಾಗುತ್ತದೆ', ಎಂದೊಡನೆಯೇ ಜಾನ್ ಹೆಸರುಗಳ ಪಟ್ಟಿಯನ್ನು ಒಂದೊಂದಾಗಿ ಉಚ್ಚರಿಸತೊಡಗಿದ್ದ. ಅದರಲ್ಲಿ ಮಹಿಳಾ ಟ್ರಾಫಿಕ್ ವಾರ್ಡನ್ ವತಿಯಿಂದ ಹನ್ನಾಳ ಹೆಸರೂ ಇತ್ತು.

ಕೆಲವೇ ನಿಮಿಷಗಳಲ್ಲಿ ಅವರುಗಳೆಲ್ಲಾ ಏರ್‌ಬಸ್ ಮೂಲಕ 'ನೋಡಲ್' ಜಾಗದಲ್ಲಿ ಬ್ರೀಫಿಂಗ್‌ಗಾಗಿ ಮೀಸಲಿಟ್ಟ ಪ್ರದೇಶದಲ್ಲಿ ಹಾಜರಾಗಿದ್ದರು. ಬದಿಯಲ್ಲೇ ಸಂಚಾರ ರೋಬಾಟ್ ಪೇದೆಗಳ ದೊಡ್ಡ ತಂಡ ಜಮಾಯಿಸಿತ್ತು. ನಿರಂತರವಾಗಿ ಸಂಚಾರ